ಅಧ್ಯಾಯ–೮
ಸಾರ್ವತ್ರಿಕ ಆಡಳಿತ

ಪ್ರಜೆಗಳಿಗೆ ಮತ್ತು ಅವರ ಆಸ್ತಿಪಾಸ್ತಿಗಳಿಗೆ ರಕ್ಷಣೆ ನೀಡುವ ಮತ್ತು ಕಂದಾಯ ವಸೂಲಿ ಮಾಡುವ ಎರಡು ಪ್ರಮುಖ ಕರ್ತವ್ಯವುಳ್ಳ ಸಾಮಾನ್ಯ ಆಡಳಿತ ವ್ಯವಸ್ಥೆಯು ಪ್ರಸ್ತುತ ತನ್ನ ವ್ಯಾಪ್ತಿಯಲ್ಲಿ ಕಾನೂನು ಮತ್ತು ಶಾಂತಿ ಪಾಲನೆ ವಿಭಾಗಗಳಾದ ಪೊಲೀಸು ಹಾಗೂ ಜೈಲುಗಳು; ಬೊಕ್ಕಸಕ್ಕೆ ಅಧಿಕ ಆದಾಯ ತರುವ ಭೂಕಂದಾಯ, ಅಬ್ಕಾರಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆಗಳನ್ನು ಒಳಗೊಂಡಿರುತ್ತದೆ. ಸರ್ಕಾರದ ಸಾಮಾಜಿಕ ಮತ್ತು ಅರ್ಥಿಕ ನೀತಿ–ನಿರೂಪಣೆಗಳನ್ನು ಜಾರಿಗೆ ತರುವುದು ಕಂದಾಯ ಇಲಾಖೆಯ ಮುಖ್ಯ ಕಾರ್ಯವಾಗಿರುತ್ತದೆ.

ಕಾನೂನು, ಶಿಸ್ತು ಮತ್ತು ಸುವ್ಯವಸ್ಥೆ ಕಾಪಾಡುವುದು ಜಿಲ್ಲಾಡಳಿತದ ಮುಖ್ಯ ಜವಾಬ್ದಾರಿಯಾಗಿದ್ದು, ಜಿಲ್ಲಾಧಿಕಾರಿಯೇ ಜಿಲ್ಲಾ ದಂಡಾಧಿಕಾರಿಯಾಗಿಯೂ ಕಾರ್ಯ ನಿರ್ವಹಿಸುತ್ತಾರೆ. ಅವರಿಗೆ ಸಹಾಯಕರಾಗಿ ಉಪ–ವಿಭಾಗಾಧಿಕಾರಿ ಇದ್ದು, ಅವರು ಉಪವಿಭಾಗೀಯ ದಂಡಾಧಿಕಾರಿ ಆಗಿರುತ್ತಾರೆ. ತಾಲೂಕು ತಹಶೀಲ್ದಾರರು ತಾಲೂಕು ದಂಡಾಧಿಕಾರಿಯಾಗಿಯೂ ಹಾಗೂ ಜಿಲ್ಲಾಧಿಕಾರಿಗಳ ಕೇಂದ್ರಸ್ಥಾನ ಸಹಾಯಕರು ಅಪರ ಜಿಲ್ಲಾ ದಂಡಾಧಿಕಾರಿಯಾಗಿಯೂ ಕಾರ್ಯ ನಿರ್ವಹಿಸುತ್ತಾರೆ. ಪೊಲೀಸರ ಸಹಯೋಗದೊಂದಿಗೆ ಸಾರ್ವಜನಿಕ ಶಾಂತಿ, ಶಿಸ್ತು ಮತ್ತು ಸುವ್ಯವಸ್ಥೆ ಕಾಪಾಡುವುದು ಹಾಗೂ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮ ತೆಗೆದುಕೊಂಡು ಸಮಾಜಘಾತುಕ ವ್ಯಕ್ತಿ–ಶಕ್ತಿಗಳಿಂದ ಶಿಸ್ತುಬದ್ಧ ನಾಗರಿಕರಿಗೆ ರಕ್ಷಣೆ ಒದಗಿಸುವುದುದೇ ಮುಂತಾದ ಕರ್ತವ್ಯಗಳನ್ನೂ ನಿರ್ವಹಿಸುತ್ತಾರೆ.

ಉಪವಿಭಾಗಾಧಿಕಾರಿ: ಹುಣಸೂರು ೧೯೮೨ರಿಂದಲೂ ಮೈಸೂರು ಜಿಲ್ಲೆಯ ಉಪವಿಭಾಗಗಳಲ್ಲಿ ಒಂದಾಗಿದೆ. ಇದರ ಆಡಳಿತ ವ್ಯಾಪ್ತಿಗೆ ಹುಣಸೂರು, ಕೃಷ್ಣರಾಜನಗರ, ಪಿರಿಯಾಪಟ್ಟಣ ಹಾಗೂ ಹೆಗ್ಗಡದೇವನಕೋಟೆ ತಾಲೂಕುಗಳು ಒಳಪಡುತ್ತವೆ. ಇವುಗಳ ಆಡಳಿತ ಜವಾಬ್ದಾರಿ ಉಪವಿಭಾಗಾಧಿಕಾರಿಗೆ ಸೇರಿದೆ, ಇವರು ಜಿಲ್ಲಾಧಿಕಾರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಾರೆ. ಇವರು ತಹಶೀಲ್ದಾರರು ಮತ್ತವರ ಕಿರಿಯ ಅಧಿಕಾರಿಗಳ ಮೇಲೆ ಆಡಳಿತಾತ್ಮಕ ಅಧಿಕಾರ ಹೊಂದಿರುತ್ತಾರೆ. ತಮ್ಮ ಉಪವಿಭಾಗಕ್ಕೆ

ಸಂಬಂಧಪಟ್ಟ ಕಂದಾಯ ಹಾಗೂ ಅಭಿವೃದ್ಧಿ ಚಟುವಟಿಕೆಗಳ ಉಸ್ತುವಾರಿ ಇವರದ್ದಾಗಿರುತ್ತದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಯು ಹೊಂದಿರುವ ಎಲ್ಲಾ ಅಧಿಕಾರವನ್ನು ಇವರೂ ಉಪವಿಭಾಗೀಯ ಮಟ್ಟದಲ್ಲಿ ಹೊಂದಿರುತ್ತಾರೆ. ಕಂದಾಯ ವಿಭಾಗದಲ್ಲಿ ಇವರು ಮೇಲ್ಮನವಿಯ ಪ್ರಥಮ ಅಧಿಕಾರಿಯಾಗಿದ್ದು, ಕರ್ನಾಟಕ ಭೂಕಂದಾಯ ಅಧಿನಿಯಮ ೧೯೬೪ರ ೫೬ನೆಯ ಪರಿಚ್ಛೇದದನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುತ್ತಾರೆ. ಇವರು ಭೂಸ್ವಾಧೀನ ಮತ್ತು ಭೂತೆರಿಗೆಯ ಅಧಿಕಾರ ಹೊಂದಿರುತ್ತಾರೆ. ಕರ್ನಾಟಕ ಭೂಸುಧಾರಣಾ ಕಾನೂನು ೧೯೬೧ರಡಿ ನೇಮಿಸಲ್ಪಟ್ಟ ಭೂನ್ಯಾಯಮಂಡಳಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸುತ್ತಾರೆ. ಕ್ಷೇತ್ರಾಭಿವೃದ್ಧಿ ಅಧಿಕಾರಿ ನಡೆಸುವ ಚಟುವಟಿಕೆಗಳ ಮೇಲ್ವಿಚಾರಣೆ ಇವರೇ ನಡೆಸಬೇಕಿದ್ದರೂ ೧೯೮೭ರಲ್ಲಿ ಜಿಲ್ಲಾ ಪರಿಷತ್ ಕಾಯ್ದೆಯು ಅಸ್ತಿತ್ವಕ್ಕೆ ಬಂದ ನಂತರ ಈ ಅಧಿಕಾರವನ್ನು ಮೊಟಕುಗೊಳಿಸಲಾಗಿದೆ. ವಿಧಾನಸಭಾ ಚುನಾವಣೆಗೆ ನಿರ್ವಚನ (ರಿಟರ್ನಿಂಗ್ ಆಫೀಸರ್) ಅಧಿಕಾರಿಯಾಗಿರುತ್ತಾರೆ. ಅಲ್ಲದೆ ಇವರು ತಮ್ಮ ಉಪವಿಭಾಗದ ದಂಡಾಧಿಕಾರಿಯಾಗಿರುತ್ತಾರೆ. (ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್). ಜಿಲ್ಲಾಧಿಕಾರಿಯ ಆದೇಶದಂತೆ ಕಾನೂನು ಪ್ರಕರಣಗಳ ತನಿಖೆ ಮತ್ತು ವಿಚಾರಣೆ ನಡೆಸುವ ಅಧಿಕಾರವನ್ನೂ ಹೊಂದಿರುತ್ತಾರೆ. ಒಬ್ಬ ಶಿರಸ್ತೇದಾರ, ನಾಲ್ವರು ಪ್ರಥಮದರ್ಜೆ ಸಹಾಯಕರು ಹಾಗೂ ಇತರೆ ಸಿಬ್ಬಂದಿ ಇವರ ಅಧಿಕಾರದಡಿಯಲ್ಲಿ ಕಾರ್ಯನಿರ್ವಹಿಸುತ್ತಾರೆ. ತಾಲೂಕು ಮಟ್ಟದ ಹಲವಾರು ಸಮಿತಿಗಳಿಗೆ ಪದನಿಮಿತ್ತ ಅಧ್ಯಕ್ಷರೂ ಜಿಲ್ಲಾ ಮಟ್ಟದ ವಿವಿಧ ಸಮಿತಿಗಳಿಗೆ ಸದಸ್ಯರೂ ಆಗಿ ಉಪವಿಭಾಗಾಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ.

ತಹಶೀಲ್ದಾರರು : ಹಿಂದೆ ಅಮಿಲ್ದಾರ(ಮಾಮಲೆದಾರ)ರೆಂದೂ ಕರೆಯಲ್ಪಡುತ್ತಿದ್ದ ಇವರು ತಾಲೂಕಿನ ಸಾಮಾನ್ಯ ಅಡಳಿತದ ಮಂಚೂಣಿಯಲ್ಲಿದ್ದು, ಇವರ ನೆರವಿಗೆ ಶಿರಸ್ತೇದಾರ್ (ಉಪತಹಶೀಲ್ದಾರ್), ಕಂದಾಯ ವೃತ್ತಗಳಲ್ಲಿ ಕಂದಾಯ ನಿರೀಕ್ಷಕರು, ವಿಶೇಷ ಕಂದಾಯ ನಿರೀಕ್ಷಕ, ದಾಖಲೆ ರಕ್ಷಕ ಹಾಗೂ ಇತರ ಸಿಬ್ಬಂದಿ ವರ್ಗವಿದೆ. ಉಪವಿಭಾಗಾಧಿಕಾರಿಗಳು ಇವರ ತಕ್ಷಣದ ಮೇಲಧಿಕಾರಿಗಳಾಗಿದ್ದು ಜಿಲ್ಲಾಧಿಕಾರಿಗಳ ಸೂಚನೆಯಂತೆ ಇವರು ಕಾರ್ಯನಿರ್ವಹಿಸುತ್ತಾರೆ. ತಾಲೂಕಿನಲ್ಲಿ ಭೂಒತ್ತುವರಿ ಸೇರಿದಂತೆ ವಿವಿಧ ಭೂ ವ್ಯವಹಾರಗಳಿಗೆ ಸಂಬಂಧಿಸಿದಂತೆ, ನಿರ್ಣಾಯಕ ಪಾತ್ರವಹಿಸುವ ಇವರು ಕಂದಾಯ ಆಕರಣೆ ಮತ್ತು ಸಂಗ್ರಹಣೆ, ತಕಾವಿ ಸಾಲ ಮರುಪಾವತಿ, ಭೂಅಭಿವೃದ್ಧಿ ಸಾಲದ ಸದ್ವಿನಿಯೋಗದ ಪರಿಶೀಲನೆ, ನೀರಾವರಿ ಶುಲ್ಕ, ಪೊಟ್‌ಹಿಸ್ಸಾ, ಮಾಪನ ಶುಲ್ಕ ಸಂಗ್ರಹ ಮುಂತಾದ ಜವಾಬ್ದಾರಿಯನ್ನು ಹೊಂದಿರುತ್ತಾರೆ. ತಾಲೂಕಿನ ಮುಖ್ಯಸ್ಥನಾಗಿ ಆಹಾರ ದಾಸ್ತಾನುಗಳ ಕ್ರಮಬದ್ಧ ಖರೀದಿ ಹಾಗೂ ನ್ಯಾಯಬೆಲೆ ಅಂಗಡಿಗಳ ಮೂಲಕ ವ್ಯವಸ್ಥಿತವಾಗಿ ವಿತರಣೆ ಮಾಡುವ ಹೊಣೆಯೂ ಇವರದಾಗಿದ್ದು, ಲೆವಿ–ಬತ್ತ, ಅಕ್ಕಿ ಸಂಗ್ರಹಣೆ, ಜೊತೆಗೆ ವಿವಿಧ ಅಕ್ಕಿಗಿರಣಿಗಳಲ್ಲಿ ಹಾಗೂ ಕೃಷಿ ಉತ್ಪನ್ನ ಸಹಕಾರಿ ಮಾರುಕಟ್ಟೆ ಸಂಘಗಳಲ್ಲಿರುವ ದಾಸ್ತಾನುಗಳ ಪರಿಶೀಲನೆ ಮಾಡಬೇಕಾಗುತ್ತದೆ. ವೃದ್ಧಾಪ್ಯವೇತನ ಮಂಜೂರು ಮಾಡುವುದು ಇವರ ಕರ್ತವ್ಯವಾಗಿದ್ದು, ತಾಲೂಕು

ಮಾಜಿಸ್ಟ್ರೇಟರಾಗಿ ತಾಲೂಕಿನಲ್ಲಿ ಶಾಂತಿ ಹಾಗೂ ಕಾನೂನು ಪರಿಪಾಲಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವ ಅಧಿಕಾರವೂ ಇವರಿಗಿರುತ್ತದೆ. ಸಹಾಯಕ ಚುನಾವಣಾ ನೊಂದಣಾಧಿಕಾರಿಯಾಗಿ, ಮತಪಟ್ಟಿಯ ರಚನೆ, ಪರಿಷ್ಕರಣೆ ಇವರ ಜವಾಬ್ದಾರಿಯಾಗಿದ್ದು, ತಾಲೂಕು ಮಟ್ಟದಲ್ಲಿ ಸಹಾಯಕ ನಿರ್ವಾಚನ ಚುನಾವಣಾಧಿಕಾರಿಯಾಗಿ ಚುನಾವಣೆಯ ಉಸ್ತುವಾರಿಯನ್ನು ನಿರ್ವಹಿಸಬೇಕಾಗುತ್ತದೆ.

ಕ್ಷೇತ್ರಾಭಿವೃದ್ಧಿ ಅಧಿಕಾರಿ ಕಚೇರಿ : ತಾಲೂಕಿನ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ಹಾಗೂ ನಿರ್ವಹಣೆ ಈ ಅಧಿಕಾರಿಯ ಹೊಣೆಯಾಗಿದ್ದು, ತಾಲೂಕು ಅಭಿವೃದ್ಧಿ ಸಮಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಇವರಾಗಿರುತ್ತಿದ್ದರು. ಆದರೆ ೧೯೮೩ರ ಜಿಲ್ಲಾ ಪರಿಷತ್ ಕಾಯ್ದೆ ಹಾಗೂ ೧೯೯೩ರ ಜಿಲ್ಲಾ ಪಂಚಾಯತ್ ಕಾಯ್ದೆಗಳಿಂದಾಗಿ ಇಂದು ತಾಲೂಕು ಪಂಚಾಯಿತಿ ಸಮಿತಿ ಎಂದು ನಾಮಾಂಕಿತಗೊಂಡಿದ್ದು, ನಿರ್ವಾಹಣಾಧಿಕಾರಿಗಳು ಮುಖ್ಯಸ್ಥರಿದ್ದು, ಜಿಲ್ಲಾ ಪಂಚಾಯತಿಯ ಉಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸಬೇಕಾಗಿದ್ದು, ಅವರ ನೆರವಿಗೆ ವ್ಯವಸ್ಥಾಪಕರು ಹಾಗೂ ಇತರ ಸಿಬ್ಬದಿ ವರ್ಗವಿರುತ್ತದೆ.

ಕಂದಾಯ ನಿರೀಕ್ಷಕರು : ತಾಲೂಕಿನಲ್ಲಿರುವ ಐದು ಹೋಬಳಿ ಕಂದಾಯ ವೃತ್ತಗಳ ಆಡಳಿತ ನಿರ್ವಹಣೆಗೆ ಪ್ರತ್ಯೇಕ ಕಂದಾಯ ನಿರೀಕ್ಷಕರಿರುತ್ತಾರೆ. ಕಂದಾಯ ವಿಷಯಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರರ ನೇರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುವ ಕಂದಾಯ ನಿರೀಕ್ಷಕರು ಭೂಕಂದಾಯ, ಅಭಿವೃದ್ಧಿ ಶುಲ್ಕ, ನೀರಾವರಿ ಶುಲ್ಕ, ಇತರೆ ಸರ್ಕಾರಿ ಬಾಕಿ, ಸಾಲ ಹಾಗೂ ಮುಂಗಡಗಳ ಮರುಪಾವತಿ ಮುಂತಾದವುಗಳ ಶೇಖರಣೆ, ಆಹಾರಧಾನ್ಯಗಳ ಖರೀದಿ ಮತ್ತು ವಿತರಣೆ ಮುಂತಾದವುಗಳನ್ನು ನಿಭಾಯಿಸಬೇಕಾಗುತ್ತದೆ. ಗ್ರಾಮಲೆಕ್ಕಿಗರ ಕಾರ್ಯವೈಖರಿಯ ಮೇಲ್ವಿಚಾರಕರಾಗಿದ್ದು, ಗ್ರಾಮಗಡಿಯ ತಪಾಸಣೆ, ಸರ್ಕಾರಿ ಜಮೀನಿನ ಒತ್ತುವರಿ ಮುಂತಾದವನ್ನೂ ಗಮನಿಸಬೇಕಾಗುತ್ತವೆ. ಉಂಬಳಿ ಜಮೀನಿನ ದಾಖಲೆಗಳ ಸಂಯೋಜನೆ, ಭೂಸ್ವಾಧೀನಗಳಂತಹ ಕಂದಾಯ ವಿಷಯಗಳ ಜೊತೆಗೆ, ವೃದ್ಧಾಪ್ಯವೇತನ ಮಂಜೂರಾತಿಗೆ ಪೂರಕ ತಪಾಸಣೆಯಂತಹ ಕಾರ್ಯಗಳನ್ನು ಇವರು ನಿರ್ವಹಿಸಬೇಕಾಗುತ್ತದೆ.

ನಾಡಕಚೇರಿ : ಅಧಿಕಾರ ವಿಕೇಂದ್ರೀಕರಣ ಹಾಗೂ ತಾಲೂಕು ಕಚೇರಿಗಳ ಮೇಲಿನ ಕಾರ್ಯಒತ್ತಡವನ್ನು ಹಗುರಗೊಳಿಸುವುದಕ್ಕಾಗಿ ೧೫-೦೮-೧೯೮೬ರಿಂದ ತಾಲೂಕಿನಲ್ಲೊಂದು ಹೋಬಳಿ ಕೇಂದ್ರದಲ್ಲಿ ನಾಡಕಚೇರಿಯನ್ನು ಪ್ರಯೋಗಾರ್ಥವಾಗಿ ಆರಂಭಿಸಲು ಹಮ್ಮಿಕೊಂಡ ಯೋಜನೆಯಂತೆ ತಾಲೂಕಿನ ಹೋಬಳಿ ಕೇಂದ್ರದಲ್ಲಿ ನಾಡಕಚೇರಿಯನ್ನು ಆರಂಭಿಸಲಾಗಿದೆ. ಈ ಕಚೇರಿಗೆ ಶಿರಸ್ತೇದಾರರು ಮುಖ್ಯಸ್ಥರಾಗಿದ್ದು, ತಹಶೀಲ್ದಾರರ ಒಂಭತ್ತು ಕಾರ್ಯಗಳ ನಿರ್ವಹಣೆಯನ್ನು ಇವರಿಗೆ ವಹಿಸಿಕೊಡಲಾಗಿದೆ. ಅವರ ನೆರವಿಗೆ ಸಿಬ್ಬಂದಿವರ್ಗವಿದ್ದು, ತಹಶೀಲ್ದಾರರು ಇವರ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

ಗ್ರಾಮಲೆಕ್ಕಿಗರು : ಪ್ರಾಚೀನ ಕಾಲದಲ್ಲಿ ಗ್ರಾಮಗಳ ಆಡಳಿತ ನಿರ್ವಹಣೆಗೆ ಆರಂಭದಲ್ಲಿ ಎಂಟು ನಂತರ ಹನ್ನೆರಡು ಜನ ಆಯಗಾರರು (ಬಾರಾಬಲೂತಿ) ಗ್ರಾಮದ ವಿವಿಧ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಆದರೆ ೧೯೪೭ರ ವೇಳೆಗೆ ಅವುಗಳಲ್ಲಿ ಗೌಡ, ಶಾನುಭೋಗ, ತೋಟಿ, ತಲಾರಿ ಹಾಗೂ ನೀರ್ಗಂಟಿಗಳಷ್ಟೆ ಚಾಲ್ತಿಯಲ್ಲಿ ಉಳಿದಿದ್ದರು. ಆದರೆ ಸ್ವಾತಂತ್ರ್ಯನಂತರದಲ್ಲಿ ಇದ್ದ ವಂಶವಾರು ಶಾನುಭೋಗಿಕೆಯನ್ನು ೧೯೭೦ರ ಕಾಯ್ದೆಯನ್ವಯ ರದ್ದುಗೊಳಿಸಲಾಯಿತು. ಆಗ ಗ್ರಾಮಾಡಳಿತವನ್ನು ಗ್ರಾಮಲೆಕ್ಕಿಗರಿಗೆ ವಹಿಸಿಕೊಡಲಾಯಿತು. ಆಡಳಿತದ ಕೆಳಘಟಕದ ಮುಖ್ಯಸ್ಥರಾದ ಇವರು ಸರ್ಕಾರ ಸಮಾಜಗಳ ನಡುವಣ ಕೊಂಡಿಯಾಗಿದ್ದು, ಗ್ರಾಮದಾಖಲೆಗಳ ಸಂರಕ್ಷಣೆ ಹಾಗೂ ಕಂದಾಯ ಶೇಖರಣೆ ಇವರ ಹೊಣೆಯಾಗಿರುತ್ತದೆ. ಹಿಂದಿನ ಶಾನುಭೋಗರ ಅಧಿಕಾರಗಳನ್ನೇ ಹೊಂದಿರುವ ಇವರ ನೆರವಿಗೆ ಗ್ರಾಮಸಹಾಯಕರಿರುತ್ತಾರೆ.

ಗ್ರಾಮಸಹಾಯಕರು : ಹಿಂದೆ ಗ್ರಾಮಗಳಲ್ಲಿ ಶಾನುಭೊಗ, ಕುಲಕರ್ಣಿ ಅಥವಾ ಪಾಟೀಲರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ತಳವಾರ, ಓಲೇಕಾರ, ತೋಟಿ ಮುಂತಾದ ಹುದ್ದೆಗಳಿಗೆ ಬದಲು, ಪ್ರಸ್ತುತ ಗ್ರಾಮಸಹಾಯಕರನ್ನು ನೇಮಿಸಲಾಗಿದೆ. ಗ್ರಾಮಸಿಪಾಯಿ ಎಂದೂ ಕೆಲವೆಡೆ ಕರೆಯಲ್ಪಡುವ ಇವರು ಗ್ರಾಮಲೆಕ್ಕಿಗರ ಸಹಾಯಕರಾಗಿ, ಸಂದೇಶವಾಹಕರಾಗಿ ದಫ್ತರು ಸಾಗಿಸುವ ಹಾಗೂ ಭೂಸರ್ವೇಕ್ಷಣ ಸಂದರ್ಭದಲ್ಲಿ ಜಮೀನನ್ನು ಅಳೆಯಲು ಬಳಸುವ ಸರಪಳಿ ಮುಂತಾದ ಸಲಕರಣೆಗಳನ್ನು ಸಾಗಿಸಲು ಕೆಲಸಗಳಲ್ಲಿ ನೆರವಾಗುತ್ತಾರೆ.

ನ್ಯಾಯಾಡಳಿತ : ಹುಣಸೂರಿನ ನ್ಯಾಯಾಲಯ ಕಟ್ಟಡವು ಸುಮಾರು ೧೬೩ ವರ್ಷಗಳಷ್ಟು ಇತಿಹಾಸ ಹೊಂದಿದೆ. ಇಲ್ಲಿ ಬ್ರಿಟೀಷರ ಕಾಲದಲ್ಲಿ; 'ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟ್' ಮಾದರಿಯ ನ್ಯಾಯಾಲಯ ಕಾರ್ಯನಿರ್ವಹಿಸುತ್ತಿತ್ತು. ಈ ಕೋರ್ಟಿಗೆ ಸಾರ್ವಜನಿಕರಿಂದ ಗಣ್ಯ ವ್ಯಕ್ತಿಯೊಬ್ಬರನ್ನು ಆರಿಸಿ ನ್ಯಾಯಾಧೀಶರನ್ನಾಗಿ ನೇಮಕ ಮಾಡಲಾಗುತ್ತಿತ್ತು. ಆ ನ್ಯಾಯಾಲಯಕ್ಕೆ ಹುಣಸೂರಿನವರೇ ಆದ ಎಚ್.ವಿ. ಹನುಮಂತಶೆಟ್ಟಿಯವರು 'ಬೆಂಚ್ ಮ್ಯಾಜಿಸ್ಟ್ರೇಟ್' ಆಗಿ ಸೇವೆ ಸಲ್ಲಿಸಿದ್ದಾರೆ. ಅನಂತರ ಬೆಂಚ್ ಮ್ಯಾಜಿಸ್ಟ್ರೇಟ್ ಪದ್ಧತಿಯನ್ನು ಬದಲಾಯಿಸಿ, ಥರ್ಡ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟ್ (ತೃತೀಯ ದರ್ಜೆ ನ್ಯಾಯಾಲಯ) ಪ್ರಾರಂಭಿಸಲಾಯಿತು. ಇದರೊಂದಿಗೆ ೧೯೨೭ರಲ್ಲಿ ಸಿವಿಲ್ ನ್ಯಾಯಾಲಯ ಪ್ರಾರಂಭವಾಯಿತು. ಹಿಂದೆ, ಸಿವಿಲ್ ನ್ಯಾಯಾಲಯ ಈಗಿನ ಬಿ.ಇ.ಓ. ಕಚೇರಿ ಇರುವಲ್ಲಿ ನಡೆಯುತ್ತಿತ್ತು. ಇದರ ಕಾರ್ಯವ್ಯಾಪ್ತಿ ಕೇವಲ ಸಿವಿಲ್ ವ್ಯಾಜ್ಯಕ್ಕೆ ಮಾತ್ರ ಸೀಮಿತವಾಗಿತ್ತು. ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ಪ್ರಸ್ತುತ ಸೇರಿರುವ, ಹಿಂದಿನ ಬ್ರಿಟೀಷ್ ಬಂಗಲೆಯ ಡ್ಯಾನ್ಸ್‌ಹಾಲ್‌ನಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟ್ ನಡೆಯುತ್ತಿತ್ತು. ಹುಣಸೂರಿನಲ್ಲಿ ಬೇರೆಡೆಯಿಂದ ಬಂದು ನೆಲೆಸಿದ ಸುಮಾರು ೧೨ಜನ ವಕೀಲರು ೧೯೨೭ರಲ್ಲಿ ವೃತ್ತಿಯನ್ನು ನಡೆಸುತ್ತಿದ್ದರು. ಅನಂತರ ಸರ್ಕಾರದ ಆದೇಶದ ಮೇರೆಗೆ ಎರಡೂ ನ್ಯಾಯಾಲಯಗಳನ್ನು ಸೇರಿಸಿ ಮುನಿಸಿಫ್ ಮ್ಯಾಜಿಸ್ಟ್ರೇಟ್ ಕೋರ್ಟ್ ರಚಿಸಲಾಯಿತು. ಇದರ ವ್ಯಾಪ್ತಿಗೆ ಹುಣಸೂರು, ಪಿರಿಯಾಪಟ್ಟಣ, ಕೃಷ್ಣರಾಜನಗರ,

ಹೆಗ್ಗಡದೇವನಕೋಟೆ ತಾಲೂಕುಗಳನ್ನು ಸೇರಿಸಲಾಯಿತು. ೧೯೮೦ರಲ್ಲಿ ಹುಣಸೂರು ಬೈಪಾಸ್ ರಸ್ತೆಯಲ್ಲಿ ಇರುವ ಹೊಸ ಕಟ್ಟಡಕ್ಕೆ ಇದನ್ನು ಸ್ಥಳಾಂತರಿಸಲಾಯಿತು. ಅನಂತರ ಹುಣಸೂರಿನ ವಕೀಲರು ಹಾಗೂ ಗಣ್ಯ ವ್ಯಕ್ತಿಗಳ ಪ್ರಯತ್ನದಿಂದ ೧೯೮೨ರಲ್ಲಿ ಸಿವಿಲ್ ಜಡ್ಜ್ ಕೋರ್ಟ್ ಪ್ರಾರಂಭವಾಗಿ ನ್ಯಾಯಾಧೀಶರನ್ನು ನೇಮಿಸಲಾಯಿತು.

ಪೊಲೀಸ್ ವ್ಯವಸ್ಥೆ : ಹುಣಸೂರು ತಾಲೂಕಿನಲ್ಲಿ ಒಂದು ಪೊಲೀಸ್ ಉಪವಿಭಾಗವಿದ್ದು ಡೆಪ್ಯೂಟಿ ಸೂಪರಿಟೆಂಡೆಂಟ್ ಆಫ್ ಪೊಲೀಸ್ (ಡಿ.ವೈ.ಎಸ್.ಪಿ) ಇದರ ಮುಖ್ಯಸ್ಥರಾಗಿರುತ್ತಾರೆ. ಹುಣಸೂರು ಉಪವಿಭಾಗದಡಿಯಲ್ಲಿ ಹುಣಸೂರು ಪಟ್ಟಣ ವೃತ್ತ, ಹುಣಸೂರು ಗ್ರಾಮಾಂತರ ವೃತ್ತ, ಹೆಗ್ಗಡದೇವನ ಕೋಟೆ, ಕೃಷ್ಣರಾಜನಗರ ಹಾಗೂ ಪಿರಿಯಾಪಟ್ಟಣಗಳು ಬರುತ್ತವೆ. ವೃತ್ತಗಳಲ್ಲಿ ವೃತ್ತ ನಿರೀಕ್ಷಕರು (ಸರ್ಕಲ್ ಇನ್ಸ್‌ಪೆಕ್ಟರ್) ಕಾರ್ಯನಿರ್ವಹಿಸುತ್ತಾರೆ. ತಾಲೂಕಿನಲ್ಲಿ ಹುಣಸೂರು ಟೌನ್, ಹುಣಸೂರು ಗ್ರಾಮಾಂತರ, ಬಿಳಿಕೆರೆ ಹಾಗೂ ಗುರುಪುರ ಔಟ್‌ಪೋಸ್ಟ್ ಹೀಗೆ ಒಟ್ಟು ನಾಲ್ಕು ಠಾಣೆಗಳಿದ್ದು ಯಾವುದೇ ಬಂಧೀಖಾನೆ (ಜೈಲ್) ಇಲ್ಲ. ಪ್ರತಿ ಠಾಣೆಯಲ್ಲೂ ಲಾಕಪ್ಪುಗಳಿದ್ದರೂ, ಶಿಕ್ಷೆಗೆ ಒಳಗಾದ ಕೈದಿಗಳನ್ನು ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿರಿಸಲಾಗುತ್ತದೆ.

ಹುಣಸೂರು, ಹೆಚ್ಚಾಗಿ ಶಾಂತಿ ಸೌಹಾರ್ದದಿಂದ ಕೂಡಿದ ಜನ ಸಮುದಾಯಗಳು ಇರುವ ತಾಲೂಕು. ಆದರೂ ಜನಸಾಮಾನ್ಯರ ಸ್ವಾಭಾವಿಕ ಗುಣಗಳಿಂದಾಗುವ ವೈಮನಸ್ಸು ಗೃಹಕಲಹಗಳಿಂದ ಉಂಟಾಗುವ ಸಮಸ್ಯೆಗಳನ್ನು, ಸಾಮಾಜಿಕವಾಗಿ ಶಾಂತಿಭಂಗ ಮಾಡುವ ಸಮಸ್ಯೆಗಳನ್ನು ತಾಲೂಕು ಪೊಲೀಸ್ ಇಲಾಖೆ ಸಮರ್ಥವಾಗಿ ಬಗೆಹರಿಸಿಕೊಂಡು ಬಂದಿದೆ. ವಿದ್ಯಾರ್ಥಿ ಸಮುದಾಯ ಮತ್ತು ರೈತರ ಚಳವಳಿಗಳು ಆಗಿಂದಾಗ್ಗೆ ಉದ್ಭವಿಸುವ ಸಮಸ್ಯೆಗಳಾದುದರಿಂದ, ಅವನ್ನು ನಿಯಂತ್ರಿಸಲು ಇಲಾಖೆ ಸರ್ವಕಾಲದಲ್ಲೂ ಎಚ್ಚರಿಕೆ ವಹಿಸಿದೆ. ತಾಲೂಕಿನಲ್ಲಿರುವ ಗೃಹರಕ್ಷಕ ದಳದವರ ನೆರವನ್ನು ಪಡೆದುಕೊಂಡು ತಾಲೂಕಿನಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುತ್ತಿದೆ.

ಸ್ಥಳೀಯ ಸ್ವಯಂ ಆಡಳಿತ : ಪ್ರಾಚೀನ ಕಾಲದಿಂದಲೂ ಸ್ಥಳೀಯ ಸ್ವಯಂ ಆಡಳಿತ ಪದ್ಧತಿ ಈ ನಾಡಿನಲ್ಲಿತ್ತು. ಹುಣಸೂರು ತಾಲೂಕು ಕೂಡ ಸ್ಥಳೀಯ ಆಡಳಿತ ಪದ್ಧತಿಯನ್ನು ಹಿಂದಿನಿಂದಲೂ ಕಂಡುಂಡಿರುವ ಪ್ರದೇಶವಾಗಿದೆ. ಗ್ರಾಮಗಳ ಆಡಳಿತವನ್ನು ಗ್ರಾಮಪಂಚಾಯ್ತಿಗಳು ನಿರ್ವಹಿಸುತ್ತಿದ್ದು, ಗೌಡ, ಪಟೇಲ, ಶಾನುಭೋಗ, ತಲಾಟಿ, ನೀರ್ಗಂಟಿ ಮುಂತಾದ ಅಧಿಕಾರಿವರ್ಗ ಗ್ರಾಮಗಳಲ್ಲಿರುತ್ತಿತ್ತು. ಅಗ್ರಹಾರಗಳ ನಿರ್ವಹಣೆಗೆ ಮಹಾಜನ ಸಭೆ ಇರುತ್ತಿತ್ತು.

ಹುಣಸೂರು ಪುರಸಭೆ : ೧೮೭೨ರಲ್ಲಿ ಇಂದಿನ ಹುಣಸೂರು ಪಟ್ಟಣದ ಆಡಳಿತವನ್ನು, ೧೮೭೦ರ ಮುನಿಸಿಪಲ್ ಕಾಯ್ದೆಯನ್ವಯ ಪುರಸಭೆ ಸಮಿತಿಗೆ ತಾತ್ಕಾಲಿಕವಾಗಿ ವಹಿಸಲಾಯಿತು. ಆಗ ಹುಣಸೂರು ಪಟ್ಟಣದ ಜನಸಂಖ್ಯೆ ಮೂರು ಸಾವಿರಕ್ಕಿಂತ ಕಡಿಮೆಯಿತ್ತು. ಈ ಸಮಿತಿಗೆ ಅಧ್ಯಕ್ಷರನ್ನು ಜಿಲ್ಲಾಧಿಕಾರಿಗಳ ಶಿಫಾರಸ್ಸಿನಂತೆ, ಸರ್ಕಾರವೇ

ನೇಮಿಸುತ್ತಿತ್ತು. ಇದನ್ನು ೧೯೧೭ರ ನಂತರ ಉಪಪುರಸಭಾ ಸಮಿತಿ ನಿಯಂತ್ರಣಕ್ಕೆ ಒಳಪಡಿಸಲಾಯಿತು. ಮುಂದೆ ೧೯೨೫ರಲ್ಲಿ ಪುರಸಭಾ ಸ್ಥಾನಕ್ಕೇರಿಸಲಾಯಿತು. ಇದೇ ಪರಿಸ್ಥಿತಿ ೧೯೪೦ರ ನಂತರವೂ ಮುಂದುವರಿಯಿತು. ೧೯೪೦–೪೧ರ ಸಾಲಿನಲ್ಲಿ ಹುಣಸೂರು ಪುರಸಭೆಯ ಆದಾಯವು ರೂ. ೧೭,೮೫೪ ಇದ್ದು, ರೂ. ೧೭,೭೬೪ಗಳನ್ನು ವಿವಿಧ ಉದ್ದೇಶಗಳಡಿ ವೆಚ್ಚ ಮಾಡಲಾಗಿತ್ತು. ಅಲ್ಲಿಂದಿಲ್ಲಿಯವರೆವಿಗೂ ಹುಣಸೂರು ಪಟ್ಟಣವು ಪುರಸಭೆಯ ಆಡಳಿತಕ್ಕೆ ಒಳಪಟ್ಟಿದ್ದು, ಮುಂದೆ ಅಸ್ತಿತ್ವಕ್ಕೆ ಬಂದ ೧೯೬೪ರ ಪುರಸಭಾ ಕಾಯ್ದೆಯು ಪುರಸಭಾ ಆಡಳಿತಕ್ಕೆ ಏಕಸ್ವರೂಪವನ್ನು ನೀಡುವಲ್ಲಿ ಯಶಸ್ವಿಯಾಯಿತು. ಹುಣಸೂರು ಪುರಸಭೆಯು ೧೯೭೭ರಲ್ಲಿ ರೂ. ೫,೮೪,೦೭೩ಗಳ ಆದಾಯವನ್ನು ಹೊಂದಿದ್ದು, ೫,೭೯,೧೩೪ ರೂ.ಗಳನ್ನು ವೆಚ್ಚಮಾಡಿತ್ತು. ಅದೇ ೧೯೮೬–೮೭ರ ಸಾಲಿನಲ್ಲಿ ಈ ಪುರಸಭೆಯ ಆದಾಯವು ೧೦,೨೩,೭೪೯ ರೂ.ಗಳಿದ್ದು, ೧೦,೯೬,೩೫೦ ರೂ.ಗಳನ್ನು ಪುರಸಭೆಯ ಅಭಿವೃದ್ಧಿಯೂ ಸೇರಿದಂತೆ ವಿವಿಧ ಉದ್ದೇಶಗಳಿಗಾಗಿ ಬಳಸಲಾಗಿತ್ತು. ೨೦೦೧ರ ಗಣತಿಯಂತೆ ಹುಣಸೂರು ಪುರಸಭೆಯು ೨೩ ವಾರ್ಡುಗಳನ್ನು ಹೊಂದಿದ್ದು, ಪಟ್ಟಣ ಜನಸಂಖ್ಯೆಯು ೪೩,೯೦೦ (೨೨,೩೬೦ ಪುರುಷರು + ೨೨,೩೬೦ ಮಹಿಳೆಯರು) ಇದ್ದು, ಪಟ್ಟಣದಲ್ಲಿ ೯,೨೫೩ ಕುಟುಂಬಗಳು ವಾಸಿಸುತ್ತಿದ್ದವು.

ಗ್ರಾಮಪಂಚಾಯ್ತಿಗಳು : ಆಧುನಿಕ ಗ್ರಾಮಪಂಚಾಯ್ತಿ ಆಡಳಿತ ವ್ಯವಸ್ಥೆಯು ಜಾರಿಗೆ ಬರುವುದಕ್ಕೆ ಮೊದಲೇ ಸಂಸ್ಥಾನದ ಗ್ರಾಮಗಳ ರಕ್ಷಣೆಯನ್ನು ನೈರ್ಮಲ್ಯವನ್ನು ಆರೋಗ್ಯ ಇಲಾಖೆಯೇ ೧೮೯೮ರ ಗ್ರಾಮೀಣ ನೈರ್ಮಲ್ಯ ಕಾಯ್ದೆಯನ್ವಯ ನಿರ್ವಹಿಸುತ್ತಿತ್ತು. ಹಳ್ಳಿಗಳ ಅಭಿವೃದ್ಧಿ ಯೋಜನೆಯನ್ನು ಸರ್.ಎಂ. ವಿಶ್ವೇಶ್ವರಯ್ಯನವರು ೧೯೧೪ರಷ್ಟು ಹಿಂದೆಯೇ ಜಾರಿಗೊಳಿಸಿದ್ದರು. ಮುಂದೆ ೧೯೧೮ರ ಕಾಯ್ದೆಯನ್ವಯ ಸಂಸ್ಥಾನದಲ್ಲಿ ಕಾನೂನುಬದ್ಧ ಗ್ರಾಮಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದವು. ಅದರಂತೆ ಪ್ರತಿ ಗ್ರಾಮಕ್ಕೆ ಕೆಲವೊಮ್ಮೆ ಗ್ರಾಮಗಳ ಗುಂಪಿಗೆ ರೂಪಿಸಲ್ಪಟ್ಟ ಗ್ರಾಮಪಂಚಾಯ್ತಿಗಳಿಗೆ ನಾಮಾಂಕಿತ ಅಧ್ಯಕ್ಷರನ್ನು ನೇಮಿಸಲಾಗುತ್ತಿದ್ದು, ಅವುಗಳಿಗಾಗಿ ಪ್ರತ್ಯೇಕ ಸಂಪನ್ಮೂಲವನ್ನು ಒದಗಿಸಲಾಯಿತು. ಮುಂದೆ ೧೯೨೭ರಲ್ಲಿ ಗ್ರಾಮ ಅಭಿವೃದ್ಧಿ ಸಮಿತಿಗಳನ್ನು ರದ್ದುಪಡಿಸಿ, ಪಂಚಾಯ್ತಿಗಳನ್ನು ಶಾಸನಬದ್ಧವಾಗಿ ರಚಿಸಲಾಯಿತು. ಪಂಚಾಯ್ತಿಗಳಿಗೆ ಐದರಿಂದ ಹನ್ನೆರಡು ಸದಸ್ಯರಿದ್ದು, ಅರ್ಧದಷ್ಟು ಸದಸ್ಯರನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುತ್ತಿತ್ತು. ಗ್ರಾಮಪಂಚಾಯ್ತಿಗಳು ಹಳ್ಳಿಯ ನೈರ್ಮಲ್ಯ, ಸಂಪರ್ಕ, ಆರೋಗ್ಯ ಮುಂತಾದ ಕಡ್ಡಾಯ ಹಾಗೂ ಐಚ್ಛಿಕ ಕಾರ್ಯಗಳನ್ನು ನಿರ್ವಹಿಸಬೇಕಾಗಿತ್ತು. ಮನೆ, ಅಂಗಡಿ, ನಿವೇಶನ, ಹಿತ್ತಿಲುಗಳ ಮೇಲೆ ತೆರಿಗೆ ವಿಧಿಸುವ ಅಧಿಕಾರ ಗ್ರಾಮಪಂಚಾಯ್ತಿಗಳಿಗಿದ್ದು, ಇವನ್ನು ೧೯೨೭ರ ಕಾಯ್ದೆಯ ನಿಬಂಧನೆ ಮೂರರ ಪ್ರಕಾರ ಸ್ಥಳೀಯ ಕಂದಾಯ ಅಧಿಕಾರಿಗಳ ನೇರ ನಿಯಂತ್ರಣಕ್ಕೊಳಪಡಿಸಿ ಉಸ್ತುವಾರಿಯನ್ನು ತಹಶೀಲ್ದಾರರಿಗೆ ವಹಿಸಲಾಯಿತು. ಅದರಂತೆ ೧೯೪೬ರ ವೇಳೆಗೆ ತಾಲೂಕಿನಲ್ಲಿದ್ದ ೧೨೫ ಗ್ರಾಮ ಪಂಚಾಯ್ತಿಗಳು ೧೯೫೯ರವರೆಗೆ ಇವು ಜಿಲ್ಲಾ

ಮಂಡಳಿ ಕಾಯ್ದೆಯನ್ವಯ ಕಾರ್ಯನಿರ್ವಹಿಸುತ್ತಿದ್ದವು. ಅನಂತರ ೧೯೫೯ರ ಕರ್ನಾಟಕ ಗ್ರಾಮಪಂಚಾಯ್ತಿ ಮತ್ತು ಸ್ಥಳೀಯ ಸಂಸ್ಥೆಗಳ ಕಾಯ್ದೆಯು ೧೯೮೫ರವರೆಗೆ ಜಾರಿಯಲ್ಲಿತ್ತು. ಆ ಪ್ರಕಾರ ೧೫೦೦–೧೦,೦೦೦ ಜನಸಂಖ್ಯೆಯನ್ನು ಹೊಂದಿರುವ ಕಂದಾಯ ಗ್ರಾಮ ಅಥವಾ ಕಂದಾಯ ಗ್ರಾಮಗಳ ಗುಂಪಿಗೆ ಒಂದರಂತೆ ಗ್ರಾಮಪಂಚಾಯ್ತಿಗಳು ಕಾರ್ಯನಿರ್ವಹಿಸುತ್ತಿದ್ದವು. ಪ್ರತಿ ಪಂಚಾಯ್ತಿಯಲ್ಲೂ ೧೧ ರಿಂದ ೧೯ ಸದಸ್ಯರು ಇರಬೇಕಾಗಿತ್ತು.

ಪ್ರತಿ ಗ್ರಾಮಪಂಚಾಯ್ತಿಗೆ ಬೇಕಾದ ಆರ್ಥಿಕ ಸಂಪನ್ಮೂಲವನ್ನು ಆಯಾ ಗ್ರಾಮದ ಭೂಕಂದಾಯದ ಶೇ.೩೦ ಭಾಗ ಅನುದಾನ ದೊರೆಯುತ್ತಿದ್ದು, ವಿವಿಧ ಉದ್ದೇಶಗಳಿಗಾಗಿ ಶೇ೧೦ ವಿವೇಚನಾಧೀನ ಅನುದಾನ ಸರ್ಕಾರದಿಂದ ಬರುತ್ತಿತ್ತು. ಅಲ್ಲದೆ ಪಂಚಾಯ್ತಿಯು ನಿವೇಶನ, ಕಟ್ಟಡ, ವ್ಯಾಪಾರ, ಉದ್ಯೋಗ, ಹಬ್ಬ, ಜಾತ್ರೆ, ಮನರಂಜನೆ ಹಾಗೂ ವಾಹನ ತೆರಿಗೆ ವಿಧಿಸುವ ಹಾಗೂ ಬಸ್‌ನಿಲ್ದಾಣ, ಮಾರುಕಟ್ಟೆ, ಗಾಡಿ ನಿಲ್ದಾಣಗಳಿಂದ ಸುಂಕ ಸಂಗ್ರಹಿಸುವ ಅಧಿಕಾರವನ್ನು ಹೊಂದಿತ್ತು. ಗ್ರಾಮಪಂಚಾಯ್ತಿಯ ಕಾರ್ಯದರ್ಶಿಯು ಗ್ರಾಮಲೆಕ್ಕಿಗನಿದ್ದು, ರೂ. ೧೨,೦೦೦ ಕ್ಕಿಂತ ಹೆಚ್ಚು ವಾರ್ಷಿಕ ಆದಾಯವಿರುವ ಗ್ರಾಮಪಂಚಾಯ್ತಿಗಳಿಗೆ ಪ್ರತ್ಯೇಕವಾಗಿ ಪಂಚಾಯ್ತಿ ಕಾರ್ಯದರ್ಶಿಯನ್ನು ನೇಮಿಸಬಹುದಾಗಿತ್ತು. ಗ್ರಾಮಪಂಚಾಯ್ತಿ ಮಟ್ಟದಲ್ಲಿ ಚುನಾವಣೆ ಮೂಲಕ ೧. ಕೃಷಿ ೨. ಆರೋಗ್ಯ, ೩. ಗ್ರಾಮಕೈಗಾರಿಕೆ, ೪. ಸಾಮಾಜಿಕ ನ್ಯಾಯ ಸಮಿತಿಯನ್ನು ರಚಿಸಿ ಕಾರ್ಯ ನಿರ್ವಹಿಸಬೇಕಾಗಿದ್ದು, ಕನಿಷ್ಟ ತಿಂಗಳಿಗೊಮ್ಮೆಯಾದರೂ ಗ್ರಾಮಪಂಚಾಯ್ತಿಯ ಸಭೆಯನ್ನು ಸೇರಿಸಬೇಕಾಗಿತ್ತು. ೧೯೯೩ರ ಪಂಚಾಯತ್ ರಾಜ್ ಕಾಯ್ದೆಯ ನಂತರವೂ ಗ್ರಾಮಪಂಚಾಯ್ತಿ ವ್ಯವಸ್ಥೆ ಮುಂದುವರಿದಿದೆ.

ಕರ್ನಾಟಕ ಜಿಲ್ಲಾ ಪರಿಷತ್ ಕಾಯ್ದೆ ೧೯೮೩ : ಆಡಳಿತ ವಿಕೇಂದ್ರೀಕರಣದ ಮೂಲಕ ಗ್ರಾಮಸ್ವರಾಜ್ ಸ್ಥಾಪಿಸುವ ಉದ್ದೇಶದಿಂದ ಸರ್ಕಾರವು ೧೯೮೩ರಲ್ಲಿ ಸ್ವೀಕರಿಸಿದ ಈ ಕಾಯ್ದೆಯನ್ವಯ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷತ್, ಗ್ರಾಮಮಟ್ಟದಲ್ಲಿ ಮಂಡಲ ಪಂಚಾಯ್ತಿ ತಾಲೂಕು ಮಟ್ಟದಲ್ಲಿ ತಾಲೂಕು ಪಂಚಾಯಿತಿ ಸಮಿತಿಗಳು ೧೯೮೭ರಲ್ಲಿ ತಾಲೂಕಿನಲ್ಲಿ ಅಸ್ತಿತ್ವಕ್ಕೆ ಬಂದವು.

ಮಂಡಲ ಪಂಚಾಯಿತಿಗಳು : ಸರ್ಕಾರದ ವಿವಿಧ ಯೋಜನೆಗಳನ್ನು ಜಾರಿಗೊಳಿಸಲು ಹಾಗೂ ವಯಸ್ಕರ ಶಿಕ್ಷಣ, ಗೃಹ ನಿರ್ಮಾಣ, ಗ್ರಾಮೀಣ ನೀರು ಸರಬರಾಜು, ಹಿಂದುಳಿದ ವರ್ಗದವರ ಕಲ್ಯಾಣ, ಗ್ರಾಮೀಣ ರಸ್ತೆ–ಸೇತುವೆಗಳ ಅಭಿವೃದ್ಧಿ ಮುಂತಾದ ಕಲ್ಯಾಣ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಮಂಡಲ ಪಂಚಾಯ್ತಿಗಳ ಪಾತ್ರ ಹಿರಿದಾಗಿದ್ದು, ಎಂಟರಿಂದ ೧೨,೦೦೦ ಜನಸಂಖ್ಯೆ ಇರುವ ಹಳ್ಳಿ ಅಥವಾ ಹಳ್ಳಿಗಳ ಗುಂಪಿಗೊಂದು ಮಂಡಲ ಪಂಚಾಯ್ತಿಯನ್ನು ರಚಿಸಲಾಗಿದ್ದು, ಪ್ರತಿ ೪೦೦ ಜನರಿಗೆ ಒಬ್ಬ ಪ್ರತಿನಿಧಿಯನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುತ್ತದೆ. ಪ್ರತಿ ಮಂಡಲದಲ್ಲೂ ೨೦ ರಿಂದ ೩೦ ಸದಸ್ಯರಿದ್ದು, ಉಪಸಮಿತಿಗಳನ್ನು ರಚಿಸುವ

ಮೂಲಕ ಮಂಡಲ ಪಂಚಾಯ್ತಿಯು ಅಭಿವೃದ್ಧಿ ಕಾರ್ಯದಲ್ಲಿ ತೊಡಗುತ್ತಿದ್ದು, ಅದಕ್ಕೆ ಪ್ರಧಾನ ಹಾಗೂ ಉಪಪ್ರಧಾನರಿರುತ್ತಿದ್ದರು.

ಗ್ರಾಮ ಸಭೆ : ಪ್ರತಿ ಗ್ರಾಮಕ್ಕೂ ಒಂದೊಂದು ಗ್ರಾಮಸಭೆ ಇದ್ದು, ಗ್ರಾಮದ ಕಲ್ಯಾಣಕ್ಕೆ ಸಂಬಂಧಿಸಿದ ಯೋಜನೆಗಳ ರಚನೆ, ವಿವಿಧ ಕಾರ್ಯಕ್ರಮಗಳಡಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು ಇದರ ಜವಾಬ್ದಾರಿಯಾಗಿದ್ದು, ಗ್ರಾಮಸಭೆಗಳ ಶಿಫಾರಸ್ಸುಗಳನ್ನು ಮಂಡಲ ಪಂಚಾಯ್ತಿಯು ಪರಿಗಣಿಸುತ್ತಿತ್ತು.

ತಾಲೂಕು ಪಂಚಾಯಿತಿ : ಮಂಡಲ ಪಂಚಾಯಿತಿಗಳು ಹಾಗೂ ಜಿಲ್ಲಾ ಪರಿಷತ್ ನಡುವೆ ಸಂಪರ್ಕ ಸೇತುವೆಯಾಗಿರುವ ಇದು ತಾಲೂಕಿನ ಚುನಾಯಿತ ಶಾಸಕರು, ಮಂಡಲ ಪಂಚಾಯ್ತಿ ಪ್ರಧಾನರು ಪ್ರಾಥಮಿಕ ವ್ಯವಸಾಯ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರ ಹಾಗೂ ಇತರರನ್ನು ಸದಸ್ಯರನ್ನಾಗಿ ಹೊಂದಿರುತ್ತದೆ. ಮಂಡಲ ಪಂಚಾಯ್ತಿಗಳಿಗೆ ಸಲಹೆ ಸೂಚನೆ ನೀಡುವುದರ ಜೊತೆಗೆ ತಾಲೂಕಿನ ಅಭಿವೃದ್ಧಿ ಯೋಜನಾ ಕಾರ್ಯಕ್ರಮಗಳನ್ನು ಪರಿಶೀಲಿಸುತ್ತಿತ್ತು.

ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ (೧೯೯೩) ಗ್ರಾಮ ಸ್ವರಾಜ್ ವ್ಯವಸ್ಥೆಯನ್ನು ಉತ್ತಮಗೊಳಿಸುವ ದೃಷ್ಟಿಯಿಂದ ಈ ಕಾಯ್ದೆಯನ್ನು ೧೯೯೩ರಲ್ಲಿ ಜಾರಿಗೆ ತರಲಾಯಿತು. ಈ ಮೊದಲು ಕಾರ್ಯನಿರ್ವಹಿಸುತ್ತಿದ್ದ ಮಂಡಲ ಪಂಚಾಯ್ತಿ, ತಾಲೂಕು ಪಂಚಾಯಿತಿ ಸಮಿತಿಗಳ ಸ್ಥಳದಲ್ಲಿ ಗ್ರಾಮ ಪಂಚಾಯ್ತಿ ಹಾಗೂ ತಾಲೂಕು ಪಂಚಾಯ್ತಿಗಳು ಕಾರ್ಯಾರಂಭ ಮಾಡಿದವು. ಸಂವಿಧಾನದ ೭೩ನೆಯ ತಿದ್ದುಪಡಿಯ ನಂತರ ಜಾರಿಗೆ ಬಂದಿರುವ ಈ ಕಾಯ್ದೆಯನ್ವಯ ಗ್ರಾಮಸಭೆಗಳನ್ನು ಬಲಿಷ್ಟಗೊಳಿಸಲಾಗಿದೆ. ಈ ಕಾಯ್ದೆಯನ್ವಯ ಪ್ರತಿ ಗ್ರಾಮ ಪಂಚಾಯ್ತಿಗೆ ಆರಂಭದಲ್ಲಿ ಒಂದು ಲಕ್ಷ ರೂ.ಗಳ ಅನುದಾನ ನೀಡಲಾಗಿದ್ದು, ಅದನ್ನು ಸಿಬ್ಬಂದಿ ವೆಚ್ಚಕ್ಕೆ ಬಳಸದೆ, ನೀರು ಮತ್ತು ವಿದ್ಯುತ್ ವ್ಯವಸ್ಥೆಗೆ ಬಳಸಿಕೊಳ್ಳಬೇಕಾಗಿತ್ತು. ೧೯೯೧ರ ಜನಗಣತಿಯಂತೆ ತಾಲೂಕಿನಲ್ಲಿ ೩೬ ಗ್ರಾಮಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದು ೧೯೯೩ರ ಡಿಸೆಂಬರ್ ಕೊನೆಗೆ ಚುನಾವಣೆಗಳೂ ನಡೆದವು. ತಾಲೂಕು ಪಂಚಾಯ್ತಿಗಳಿಗೆ ೧೯೯೫ರ ಮಾರ್ಚ್‌ನಲ್ಲಿ ಚುನಾವಣೆ ನಡೆದವು. ಪ್ರತಿ ೧೦,೦೦೦ ಜನಸಂಖ್ಯೆಗೆ ಒಬ್ಬರಂತೆ ತಾಲೂಕು ಪಂಚಾಯ್ತಿಗೆ ಪ್ರತಿ ೪೦,೦೦೦ ಜನಸಂಖ್ಯೆಗೆ ಒಬ್ಬರಂತೆ ಜಿಲ್ಲಾ ಪಂಚಾಯ್ತಿಗೆ ಪ್ರತಿನಿಧಿಗಳನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುತ್ತದೆ. ಇದು ಐದು ವರ್ಷ ಕಾಲಾವಧಿಯನ್ನು ಹೊಂದಿದ್ದು, ಪ್ರತಿ ಹಂತದಲ್ಲೂ ಗರಿಷ್ಟ ಮೀಸಲಾತಿಯನ್ನು ಶೇ (೨೩+೩೩) ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದೆ. ತಾಲೂಕಿನಲ್ಲಿರುವ ಲೋಕಸಭಾ ಹಾಗೂ ವಿಧಾನಸಭಾ ಸದಸ್ಯರು ಆಯಾ ತಾಲೂಕಿನಲ್ಲಿ ಮತದಾರರಾಗಿ ನೋಂದಣಿಗೊಂಡಿರುವ ಲೋಕಸಭೆ ಹಾಗೂ ವಿಧಾನಸಭಾ ಸದಸ್ಯರು ಹಾಗೂ ಜಿಲ್ಲಾ ಪಂಚಾಯಿತಿ ಸದಸ್ಯರನ್ನು ಇದು ಒಳಗೊಂಡಿರುತ್ತದೆ. ಅಲ್ಲದೇ ಗ್ರಾಮಪಂಚಾಯ್ತಿಗಳ ೧.೫ ಭಾಗದಷ್ಟು ಅಧ್ಯಕ್ಷರನ್ನು ಸರದಿಯ ಮೇಲೆ ಒಂದು ವರ್ಷ ಅವಧಿಗೆ ತಾಲೂಕು ಪಂಚಾಯ್ತಿಗೆ

ಆಯ್ಕೆಮಾಡಲಾಗುತ್ತದೆ. ತಾಲೂಕು ಪಂಚಾಯ್ತಿಯನ್ನು ಹೆಚ್ಚು ಸಕ್ರಿಯಗೊಳಿಸಲಾಗಿದೆ. ಸುಮಾರು ಅರ್ಧಕ್ಕೂ ಹೆಚ್ಚು ಅಭಿವೃದ್ಧಿ ಕಾರ್ಯಕ್ರಮ ಹಾಗೂ ಯೋಜನೆಗಳನ್ನು ತಾಲೂಕು ಮಟ್ಟದಲ್ಲೇ ಅನುಷ್ಠಾನಗೊಳಿಸಲಾಗುತ್ತಿದ್ದು, ಅಧ್ಯಕ್ಷರು, ಉಪಾಧ್ಯಕ್ಷರ ಆಯ್ಕೆಯಲ್ಲಿ ಪ.ಜಾತಿ ಹಾಗೂ ಪ.ಪಂಗಡ ಹಿಂದುಳಿದ ವರ್ಗ ಹಾಗೂ ಮಹಿಳೆಯರಿಗೂ ಮೀಸಲಾತಿ ಒದಗಿಸಲಾಗಿದೆ. ಗ್ರಾಮಪಂಚಾಯ್ತಿ ಹಾಗೂ ತಾಲೂಕು ಪಂಚಾಯ್ತಿ ಕಾರ್ಯ ಪ್ರಗತಿಯನ್ನು ಜಿಲ್ಲಾ ಪಂಚಾಯತ್ ಪರಿಶೀಲಿಸುತ್ತದೆ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ೧೯೯೩ರ ಪ್ರಕಾರ ತಾಲೂಕಿನಲ್ಲಿ ೩೦ ಗ್ರಾಮ ಪಂಚಾಯ್ತಿಗಳಿದ್ದು, ಒಟ್ಟು ೫೩೨ ಸದಸ್ಯರನ್ನು ಹೊಂದಿದ್ದವು. ಹರವೆ(೧೮), ಹಿರಿಕ್ಯಾತನಹಳ್ಳಿ(೧೯), ಗವಡಗೆರೆ(೨೩), ಮುಳ್ಳೂರು(೨೦), ಬೋಳನಹಳ್ಳಿ(೨೪), ಹಳೇಬೀಡು(೧೬), ಬಿಳಿಕೆರೆ(೧೮), ಮನುಗನಹಳ್ಳಿ(೧೬), ಗಾಗೇನಹಳ್ಳಿ(೧೬), ಬನ್ನಿಕುಪ್ಪೆ(೧೯), ಮರದೂರು(೧೬), ಕಟ್ಟೆಮಳಲವಾಡಿ(೨೨), ಕೊತ್ತೇಗಾಲ(೧೬), ಬೆಲ್ಕುಂದ(೧೫), ಕಲ್ಲಹಳ್ಳಿ(೧೫), ಬೀಜಗನಹಳ್ಳಿ(೧೫), ಉದ್ದೂರು ಕಾವಲ್ (ಬ್ಯಾಡರಹಳ್ಳಿ ಕಾಲನಿ, ರತ್ನಾಪುರಿ)(೧೭), ಚಲ್ಲಹಳ್ಳಿ(೧೫), ಸಿಂಗರಮಾರನಹಳ್ಳಿ(೧೪), ಕರಿಮುದ್ದನಹಳ್ಳಿ(೧೫), ಧರ್ಮಾಪುರ(೧೫), ಉಯ್ಯಗೊಂಡನಹಳ್ಳಿ(೧೭), ಆಸ್ಪತ್ರೆಕಾವಲ್(೨೨), ಗೋವಿಂದನಹಳ್ಳಿ(೧೨), ಉಮ್ಮತ್ತೂರು(೨೧), ತಟ್ಟೆಕೆರೆ(೨೧), ಕರ್ಣಕುಪ್ಪೆ(೧೮), ನೇರಳಕುಪ್ಪೆ(೧೭), ಹನಗೋಡು(೨೩), ದೊಡ್ಡಹೆಜ್ಜೂರು(೧೭). ಇಲ್ಲಿ ಕಂಸದಲ್ಲಿ ನೀಡಿರುವ ಅಂಕಿಯು ೨೦೦೧ರ ಗಣತಿಯಂತೆ ನಿಗದಿಪಡಿಸಿರುವ ಆಯಾ ಪಂಚಾಯ್ತಿಯ ಸದಸ್ಯ ಬಲವನ್ನು ಸೂಚಿಸುತ್ತದೆ. ೨೦೧೦ರಲ್ಲಿ ಜರುಗಿದ ತಾಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಹುಣಸೂರು ತಾಲೂಕಿನ ೨೧ ತಾಲೂಕು ಪಂಚಾಯಿತಿ ಸ್ಥಾನಗಳಲ್ಲಿ ೧೧–ಜೆ.ಡಿ.(ಎಸ್)ಗೂ, ೦೨–ಭಾ.ಜ.ಪ. ಹಾಗೂ ಉಳಿದ ಮೂರು ಕಾಂಗ್ರೆಸ್ ಪಕ್ಷಕ್ಕೂ ಲಭಿಸಿತ್ತು.

ಇತರ ಇಲಾಖೆಗಳು

ಪ್ರಜೆಗಳ ಸರ್ವಾಂಗೀಣ ಪ್ರಗತಿಗಾಗಿ ಸರ್ಕಾರವು ಕಾಲಕಾಲಕ್ಕೆ ರೂಪಿಸುವ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರಲು ಕಂದಾಯ, ಲೋಕೋಪಯೋಗಿ, ಅಬ್ಕಾರಿ, ಗ್ರಾಮೀಣಾಭಿವೃದ್ಧಿ, ಸಾರಿಗೆ ಮುಂತಾದ ೧೧೦ಕ್ಕೂ ಹೆಚ್ಚು ಸರ್ಕಾರಿ ಇಲಾಖೆಗಳು ಹಾಗೂ ಹಲವಾರು ಸಾರ್ವತ್ರಿಕ ನಿಗಮಗಳು ರಾಜ್ಯದಲ್ಲಿ ಅಸ್ತಿತ್ವದಲ್ಲಿವೆ. ಅಗತ್ಯಕ್ಕನುಗುಣವಾಗಿ ವಿವಿಧ ಇಲಾಖೆಯ ಕಚೇರಿಗಳು ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆ ಹಿನ್ನೆಲೆಯಲ್ಲಿ ತಾಲೂಕಿನಲ್ಲಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಕಚೇರಿ ಹಾಗೂ ನಿಗಮಗಳ ಬಗ್ಗೆ ಮಾಹಿತಿಯನ್ನಿಲ್ಲಿ ನೀಡಲಾಗಿದೆ.

ಅಬಕಾರಿ ಇಲಾಖೆ : ಪಾನನಿರೋಧ ರದ್ದಾದ ನಂತರ ೧೯೬೭ರಲ್ಲಿ ಆರಂಭಗೊಂಡ ಅಬಕಾರಿ ಇಲಾಖೆಯ ತಾಲೂಕು ವಲಯ ಕಚೇರಿಯು ಹುಣಸೂರಿನಲ್ಲಿದ್ದು, ಅಬಕಾರಿ

ನಿರೀಕ್ಷಕರು ಅದರ ಮುಖ್ಯಸ್ಥರಾಗಿರುತ್ತಾರೆ. ತಾಲೂಕು ಮಟ್ಟದಲ್ಲಿ ಮದ್ಯಪಾನೀಯಗಳ ಗುಣಮಟ್ಟ ಪರಿಶೀಲನೆ, ಅಕ್ರಮ ಮದ್ಯ ಸಾರಾಯಿ ತಯಾರಿಕಾ ಘಟಕಗಳ ನಿರ್ಮೂಲನೆ ಹಾಗೂ ಅಕ್ರಮ ಮದ್ಯಮಾರಾಟ ತಡೆಗಟ್ಟಲು ಅಗತ್ಯ ಕಾನೂನು ಕ್ರಮ ಕೈಗೊಳ್ಳುವುದು ಮುಂತಾದವು ಈ ಕಚೇರಿಯ ಕರ್ತವ್ಯಗಳಾಗಿದ್ದು, ಅವರ ನೆರವಿಗೆ ಸಿಬ್ಬಂದಿ ವರ್ಗವಿರುತ್ತದೆ. ಉಪ ಆಯುಕ್ತಾಧಿಕಾರಿಗಳು ಮೇಲಧಿಕಾರಿಗಳಾಗಿರುತ್ತಾರೆ.

ಅರಣ್ಯ ಇಲಾಖೆ : ತಾಲೂಕು ಕೇಂದ್ರ ಹುಣಸೂರಿನಲ್ಲಿ ವಲಯ ಅರಣ್ಯಾಧಿಕಾರಿಗಳ ಕಚೇರಿ ಇದೆ. ಅದರ ವ್ಯಾಪ್ತಿಗೆ ತಾಲೂಕಿನಲ್ಲಿರುವ ಅರಣ್ಯ ಪ್ರದೇಶಗಳು ಒಳಪಡುತ್ತವೆ. ಅರಣ್ಯ ರಕ್ಷಣೆ, ಅರಣ್ಯೀಕರಣ ಮುಂತಾದ ಅರಣ್ಯಾಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸುವ ಹೊಣೆ ವಲಯ ಅರಣ್ಯಾಧಿಕಾರಿಗಳದಾಗಿದ್ದು, ನೆರವಿಗೆ ಸಿಬ್ಬಂದಿ ವರ್ಗವಿದೆ.

ಉಪ ನೋಂದಣಾಧಿಕಾರಿಯ ಕಛೇರಿ : ಈ ಉಪ ನೊಂದಣಾಧಿಕಾರಿಯ ಕಛೇರಿಯು ೧೮೬೭ರಲ್ಲಿ ಪ್ರಾರಂಭಗೊಂಡಿದೆ. ೯೪ ಗ್ರಾಮಗಳು ಇದರ ವ್ಯಾಪ್ತಿಯಲ್ಲಿವೆ. ಇದು ತಾಲೂಕು ಕಛೇರಿ ಕಟ್ಟಡದ ಒಂದು ಭಾಗದಲ್ಲಿ ಕಾರ್ಯನಿರ್ವಹಿಸುತ್ತಿದೆ. ಉಪನೋಂದಣಾಧಿಕಾರಿ ಹುದ್ದೆ ಸೇರಿದಂತೆ ಆರು ಹುದ್ದೆಗಳಿವೆ. ತಾಲೂಕಿನಲ್ಲಿ ಉಪಖಜಾನೆ ಕೆಲಸ ನಿರ್ವಹಿಸುತ್ತಿದೆ.

ಕಾರ್ಮಿಕ ಇಲಾಖೆ : ವಿವಿಧ ವರ್ಗದ ಕಾರ್ಮಿಕರ ಕಲ್ಯಾಣಕ್ಕಾಗಿ ತಾಲೂಕು ವೃತ್ತ ಕಚೇರಿಯು ಹುಣಸೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕಾರ್ಮಿಕ ನಿರೀಕ್ಷಕರು ಕಚೇರಿಯ ಮುಖ್ಯಸ್ಥರಾಗಿದ್ದು, ಅವರ ನೆರವಿಗೆ ಸಿಬ್ಬಂದಿ ವರ್ಗವಿರುತ್ತದೆ. ಜಿಲ್ಲಾ ಕಾರ್ಮಿಕ ಅಧಿಕಾರಿ ಇವರ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

ಕೃಷಿ ಇಲಾಖೆ : ಕೃಷಿ ಅಭಿವೃದ್ಧಿಗೆ ಸಂಬಂಧಿಸಿದಂತೆ ತಾಂತ್ರಿಕ ಸಲಹೆ ನೀಡಲು ಕಾರ್ಯಾಗಾರ, ತರಬೇತಿ, ಪ್ರಾತ್ಯಕ್ಷಿಕೆ, ಉತ್ತಮ ಬೆಳೆ ಸ್ಪರ್ಧೆ, ಮುಂತಾದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ತಾಲೂಕು ಮಟ್ಟದಲ್ಲಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಿದೆ. ಅವರ ನೆರವಿಗೆ ಸಹಾಯಕ ಕೃಷಿ ಅಧಿಕಾರಿ, ಕೃಷಿ ವಿಸ್ತರಣಾಧಿಕಾರಿ, ಕೃಷಿ ಸಹಾಯಕ ಹಾಗೂ ಇತರ ಸಿಬ್ಬಂದಿಗಳಿರುತ್ತಾರೆ. ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಿದೆ. ತಾಲೂಕಿನಲ್ಲಿ ರೈತ ಸಂಪರ್ಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಗ್ರಂಥಾಲಯ ಇಲಾಖೆ : ತಾಲೂಕು ಮಟ್ಟದಲ್ಲಿ ಸಾಹಿತ್ಯಾಸಕ್ತಿಯನ್ನು ವೈಚಾರಿಕತೆಯನ್ನೂ ನಾಗರಿಕ ಪ್ರಜ್ಞೆಯನ್ನೂ ಜಾಗೃತಗೊಳಿಸುವ ದೃಷ್ಟಿ ಉದ್ದೇಶಗಳಿಂದ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ತಾಲೂಕು ಗ್ರಂಥಾಲಯವು ಹುಣಸೂರಿನಲ್ಲೂ, ಗ್ರಾಮೀಣ ಗ್ರಂಥಾಲಯಗಳು ಹಾಗೂ ಗ್ರಂಥ ವಿತರಣಾ ಕೇಂದ್ರಗಳು ತಾಲೂಕಿನ ವಿವಿಧೆಡೆ ಕಾರ್ಯನಿರ್ವಹಿಸುತ್ತಿವೆ. ಅಲ್ಲದೇ ಗ್ರಾಮಪಂಚಾಯ್ತಿಗಳಲ್ಲಿ ಗ್ರಂಥಾಲಯ ಸ್ಥಾಪಿಸುವ ಯೋಜನೆಯಂತೆ ತಾಲೂಕಿನ ಗ್ರಾಮಪಂಚಾಯಿತಿಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ. ತಾಲೂಕು ಕೇಂದ್ರದಲ್ಲಿ ಗ್ರಂಥಾಲಯ ಸಹಾಯಕರು ಹಾಗೂ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಗ್ರಂಥಾಲಯ ಮೇಲ್ವಿಚಾರಕರು ಕಾರ್ಯನಿರ್ವಹಿಸುತ್ತಾರೆ.

ತಾಲೂಕು ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗೀಯ ಕಚೇರಿ : ಈ ಕಚೇರಿಯು ತಾಲೂಕು ಕೇಂದ್ರದಲ್ಲಿದ್ದು, ಸಹಾಯಕ ಕಾರ್ಯಪಾಲಕ ಅಭಿಯಂತರರು ಇದರ ಮುಖ್ಯ ಅಧಿಕಾರಿಗಳಾಗಿದ್ದು, ಇತರ ಜಿಲ್ಲಾ ರಸ್ತೆ ಹಾಗೂ ಹಳ್ಳಿರಸ್ತೆಗಳ ನಿರ್ಮಾಣ, ನಿರ್ವಹಣೆ ಈ ಇಲಾಖೆಯ ಹೊಣೆಯಾಗಿದ್ದು, ಅದಕ್ಕಾಗಿ ಸಹಾಯಕ ಹಾಗೂ ಕಿರಿಯ ಅಭಿಯಂತರರ ನೆರವಿಗೆ ಸಿಬ್ಬಂದಿ ವರ್ಗವಿದೆ.

ತೋಟಗಾರಿಕೆ ಇಲಾಖೆ : ತೋಟಗಾರಿಕೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ, ತಾಲೂಕು ಮಟ್ಟದಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರೀಕ್ಷಕರ ಕಚೇರಿಯು ಕಾರ್ಯ ನಿರ್ವಹಿಸುತ್ತಿದ್ದು, ಅವರ ನೆರವಿಗೆ ಸಿಬ್ಬಂದಿ ವರ್ಗವಿದೆ. ಪಟ್ಟಣದ ಸಮೀಪ ತೋಟಗಾರಿಕಾ ಕ್ಷೇತ್ರವಿದೆ.

ನೀರಾವರಿ ಇಲಾಖೆ : ತಾಲೂಕಿಗೆ ಸಂಬಂಧಿಸಿದಂತೆ ನೀರಾವರಿ ಸೌಕರ್ಯವನ್ನು ನಿರ್ವಹಿಸಲು ಹಾಗೂ ಅಭಿವೃದ್ಧಿಪಡಿಸಲು ತಾಲೂಕು ಮಟ್ಟದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ ಇದೆ. ಅವರ ಅಧೀನದಲ್ಲಿ ಸಹಾಯಕ ಅಭಿಯಂತರರು, ಕಿರಿಯ ಅಭಿಯಂತರರು ಹಾಗೂ ಇತರ ಸಿಬ್ಬಂದಿ ವರ್ಗವಿದೆ.

ಪಶುಸಂಗೋಪನೆ ಮತ್ತು ವೈದ್ಯಕೀಯ ಸೇವೆ : ತಾಲೂಕು ಮಟ್ಟದಲ್ಲಿ ಪಶು ಚಿಕಿತ್ಸಾಲಯ ಹಾಗೂ ಗ್ರಾಮೀಣ ಪಶು ಚಿಕಿತ್ಸಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ಉಸ್ತುವಾರಿಗೆ ತಾಲೂಕುಕೇಂದ್ರದಲ್ಲಿ ಸಹಾಯಕ ಪಶುಸಂಗೋಪನಾ ವೈದ್ಯಾಧಿಕಾರಿಗಳ ಕಚೇರಿ ಇದ್ದು ಅವರ ನೆರವಿಗೆ ತಾಂತ್ರಿಕ ಸಹಾಯಕರೂ ಸೇರಿದಂತೆ ಇತರ ಸಿಬ್ಬಂದಿ ವರ್ಗವಿದೆ.

ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ : ಈ ಇಲಾಖೆಯು ಮಕ್ಕಳು ಹಾಗೂ ಮಹಿಳೆಯರ ಕಲ್ಯಾಣಕ್ಕಾಗಿ ತಾಲೂಕು ಮಟ್ಟದ ಕಾರ್ಯನಿರ್ವಹಿಸುತ್ತದೆ. ಸಿ.ಡಿ.ಪಿ.ಓ. ಇದರ ಮುಖ್ಯಸ್ಥರಾಗಿರುತ್ತಾರೆ. ಜಿಲ್ಲಾ ಮಟ್ಟದಲ್ಲಿರುವ ಇಲಾಖೆಯ ಉಪನಿರ್ದೇಶಕರು ಮೇಲಧಿಕಾರಿಯಾಗಿರುತ್ತಾರೆ.

ಮೀನುಗಾರಿಕೆ ಇಲಾಖೆ : ಸಹಾಯಕ ನಿರ್ದೇಶಕರು ತಾಲೂಕು ಮಟ್ಟದಲ್ಲಿ ಮೀನುಗಾರಿಕೆ ಇಲಾಖೆಯ ಅಧಿಕಾರಿಗಳಾಗಿದ್ದು, ಮೀನುಮರಿ ಉತ್ಪಾದನೆ, ಪಾಲನೆ, ವಿತರಣೆ ಮುಂತಾದ ಮೀನು ಕೃಷಿ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಹೊಣೆಯನ್ನು ಹೊಂದಿದ್ದು, ಅವರ ನೆರವಿಗೆ ಸಿಬ್ಬಂದಿ ವರ್ಗವಿರುತ್ತದೆ. ಹಿರಿಯ ಸಹಾಯಕ ನಿರ್ದೇಶಕರು ಇವರ ಮೇಲಧಿಕಾರಿಗಳಾಗಿರುತ್ತಾರೆ.

ರೇಷ್ಮೆ ಇಲಾಖೆ : ರೇಷ್ಮೆ ಕೃಷಿಯ ಅಭಿವೃದ್ಧಿಗಾಗಿ ತಾಲೂಕು ಕೇಂದ್ರ ಹುಣಸೂರಿನಲ್ಲಿ ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿಯು ಬಿತ್ತನೆ ಕೋಠಿ, ಹೋಬಳಿ ಮಟ್ಟದಲ್ಲಿ ರೇಷ್ಮೆ ವಿಸ್ತರಣಾಧಿಕಾರಿ ಹಾಗೂ ಕ್ಷೇತ್ರ ರೇಷ್ಮೆ ಪ್ರದರ್ಶಕ ಸಿಬ್ಬಂದಿಯೊಂದಿಗೆ ಖಾಸಗಿ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿದೆ.

ಲೋಕೋಪಯೋಗಿ ಇಲಾಖೆ (ಸಂಪರ್ಕ ಮತ್ತು ಕಟ್ಟಡ) : ತಾಲೂಕು ಮಟ್ಟದಲ್ಲಿ ರಾಜ್ಯ ಹೆದ್ದಾರಿ ಹಾಗೂ ಪ್ರಮುಖ ಜಿಲ್ಲಾ ರಸ್ತೆಗಳ ನಿರ್ವಹಣೆ, ಸೇತುವೆ ಸರ್ಕಾರಿ ಕಟ್ಟಡಗಳ ನಿರ್ಮಾಣ, ನಿರ್ವಹಣೆಗಳಿಗೆಂದೇ ಸಹಾಯಕ ಕಾರ್ಯಪಾಲಕ ಅಭಿಯಂತರರ ಉಪವಿಭಾಗೀಯ ಕಚೇರಿಯು ಕಾರ್ಯನಿರ್ವಹಿಸುತ್ತಿದೆ. ಅವರ ಅಧೀನದಲ್ಲಿ ಸಹಾಯಕ ಅಭಿಯಂತರರು, ಕಿರಿಯ ಅಭಿಯಂತರರು ತಾಂತ್ರಿಕ ಸಹಾಯಕರು ಹಾಗೂ ಇತರ ಸಿಬ್ಬಂದಿ ವರ್ಗವಿರುತ್ತದೆ. ಮುಖ್ಯ ಕಾರ್ಯಪಾಲಕ ಅಭಿಯಂತರರು (ಮೈಸೂರು) ಇವರ ಮೇಲಧಿಕಾರಿಗಳಾಗಿರುತ್ತಾರೆ.

ಶಿಕ್ಷಣ ಇಲಾಖೆ : ಗ್ರಾಮೀಣ ಭಾಗದಲ್ಲಿ ಶಿಕ್ಷಣ ಪ್ರಸರಣಕ್ಕೆ ಸಂಬಂಧಿಸಿದಂತೆ, ಕಾರ್ಯನಿರ್ವಹಿಸುತ್ತಿರುವ ಸಹಾಯಕ ಶಿಕ್ಷಣಾಧಿಕಾರಿಗಳ ಕಚೇರಿಯು ತಾಲೂಕು ಕೇಂದ್ರ ದಲ್ಲಿದೆ. ಅವರ ನೆರವಿಗೆ ಶಾಲಾನಿರೀಕ್ಷಕರು, ಹಾಗೂ ಇತರ ಸಿಬ್ಬಂದಿ ವರ್ಗವಿದೆ. ಇತ್ತೀಚೆಗೆ ಈ ಕಚೇರಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ ದರ್ಜೆಗೆ ಏರಿಸಲಾಗಿದ್ದು, ಸಹಾಯಕ ಶಿಕ್ಷಣಾಧಿಕಾರಿಗಳೂ ಅವರ ನಿಯಂತ್ರಣದಲ್ಲಿರುತ್ತಾರೆ. ಸರ್ವಶಿಕ್ಷಣ ಅಭಿಯಾನ, ಅಕ್ಷರ ದಾಸೋಹ, ಸೈಕಲ್ ವಿತರಣೆ ಮುಂತಾದ ಕಾರ್ಯಕ್ರಮಗಳನ್ನು ತಾಲೂಕು ಮಟ್ಟದಲ್ಲಿ ಈ ಕಚೇರಿಯು ನಿರ್ವಹಿಸುತ್ತದೆ.

ಸಣ್ಣ ನೀರಾವರಿ ಇಲಾಖೆ : ತಾಲೂಕು ಕೇಂದ್ರ ಹುಣಸೂರಿನಲ್ಲಿರುವ ಈ ಇಲಾಖೆಯ ಉಪವಿಭಾಗೀಯ ಕಚೇರಿಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರಿರುತ್ತಾರೆ. ಅವರ ನೆರವಿಗೆ ಸಹಾಯಕ ಹಾಗೂ ಕಿರಿಯ ಅಭಿಯಂತರರೂ ಸೇರಿದಂತೆ ಇತರ ಸಿಬ್ಬಂದಿ ವರ್ಗವಿದೆ. ವಿಭಾಗೀಯ ಮುಖ್ಯ ಕಾರ್ಯನಿರ್ವಾಹಕ ಅಭಿಯಂತರರು ಇವರ ಮೇಲಧಿಕಾರಿಗಳಾಗಿರುತ್ತಾರೆ.

ಸಮಾಜ ಕಲ್ಯಾಣ ಇಲಾಖೆ : ಹಿಂದುಳಿದ ಜಾತಿ ಹಾಗೂ ಹಿಂದುಳಿದ ಪಂಗಡಗಳ ಸರ್ವಾಂಗೀಣ ಅಭ್ಯುದಯಕ್ಕಾಗಿ ತಾಲೂಕು ಸಮಾಜ ಕಲ್ಯಾಣಾಧಿಕಾರಿಯ ಕಚೇರಿ ಇದ್ದು, ಅವರ ನೆರವಿಗೆ ಸಿಬ್ಬಂದಿ ವರ್ಗವಿದೆ. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಇವರ ಮೇಲಧಿಕಾರಿಗಳಾಗಿರುತ್ತಾರೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ : ಹಿಂದೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಎಂದು ಕರೆಯಲ್ಪಡುತ್ತಿದ್ದ ಇದನ್ನು ೧೯೯೯ರಲ್ಲಿ ವಿಭಜಿಸಿದ ಪರಿಣಾಮವಾಗಿ ಇದು ರೂಪುಗೊಂಡಿತು. ತಾಲೂಕು ಮಟ್ಟದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಕಚೇರಿ ಇದ್ದು, ಅವರ ನೆರವಿಗೆ ಸಹಾಯಕ ಹಾಗೂ ಕಿರಿಯ ಎಂಜಿನಿಯರುಗಳು ಮೀಟರ್ ರೀಡರ್ ಹಾಗೂ ಇತರ ಸಿಬ್ಬಂದಿ ವರ್ಗವಿದೆ.

* * * *